(ಆ) ೮೧.೯೪ ಕೋಟಿ ರೂಪಾಯಿಗಳು (ತಾತ್ಕಾಲಿಕ) (೧೯೮೯ನೇ ಏಪ್ರಿಲ್‌ನಿಂದ ಫೆಬ್ರುವರಿ ೧೯೯೦ರ ವರೆಗೆ)

ಮಾರಾಟ ಕರ ವಸೂಲಿ ಬಗ್ಗೆ

೩೭೮ ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು)—ಮಾನ್ಯ ಆರ್ಥಿಕ ಸಾಂಖ್ಯಿಕ, ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಒಟ್ಟು ಮಾರಾಟ ತೆರಿಗೆ ಮೊತ್ತವೆಷ್ಟು ?

ಆ) ಈ ತೆರಿಗೆಯನ್ನು ಮಾರಾಟ ಹಂತದಲ್ಲಿ ಹಾಕದೇ ಉತ್ಪಾದನಾ ಹಂತದಲ್ಲಿ ಹಾಕಿದರೆ ಮಾರಾಟ ತೆರಿಗೆಯು ಎಷ್ಟಾಗುತ್ತಿತ್ತು ?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಸಚಿವರು).—

ಅ) ರಾಜ್ಯದ ಒಟ್ಟು ಮಾರಾಟ ತೆರಿಗೆಯ ಮೊತ್ತ ಈ ಕೆಳಗೆ ತೋರಿಸಿದಂತಿದೆ.

ಆರ್ಥಿಕ ವರ್ಷ	ಮೊತ್ತ (ಕೋಟಿ ರೂಪಾಯಿಗಳಲ್ಲಿ)
೧೯೮೮-೮೯ (ಲೆಕ್ಕ)	೮೫೯.೫೦
೧೯೮೯-೯೦ (ಬಜೆಟ್ ಅಂದಾಜು)	೮೭೫.೦೦
೧೯೮೯-೯೦ (ಪರಿಷ್ಕೃತ ಅಂದಾಜು)	೯೦೪.೦೦
೧೯೯೦-೯೧ (ಬಜೆಟ್ ಅಂದಾಜು)	೧೦೧೫.೦೦

ಆ) ಉತ್ಪಾದನಾ ಹಂತದಲ್ಲಿ ಹಾಕುವ ತೆರಿಗೆಗೆ ಉತ್ಪಾದನಾ (ಎಕ್ಸೈಜ್) ಶುಲ್ಕ ಎನ್ನುತ್ತಾರೆ. ಪಾದಕಪೇಯ ವಸ್ತುಗಳ ಹೊರತಾಗಿ ಎಲ್ಲಾ ವಸ್ತುಗಳ ಮೇಲೆ ಉತ್ಪಾದನಾ ತೆರಿಗೆ (ಎಕ್ಸೈಜ್) ಹಾಕುವ ಅಧಿಕಾರ ಕೇವಲ ಕೇಂದ್ರ ಸರ್ಕಾರಕ್ಕೆ ಇದೆ.

ಮಾರಾಟ ಕರವನ್ನು ವಸ್ತುಗಳು ಮಾರಾಟವಾದಾಗ ಅಥವಾ ಖರೀದಿಸಿದಾಗ ಮಾತ್ರ ಹಾಕಬಹುದು ಉತ್ಪಾದಿತ ಪ್ರಮಾಣಗಳ ಆಧಾರದಿಂದ ಹಾಕಲಾಗುವುದಿಲ್ಲ.

ಕರ್ನಾಟಕ ಹಣಕಾಸು ನಿಗಮದ ಬಗ್ಗೆ

೩೦೭ ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆರ್ಥಿಕ ಸಾಂಖ್ಯಿಕ, ಸಾಂಖ್ಯಿಕ ಹಾಗೂ ಆಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮವು ಎಷ್ಟು ಉದ್ದಿಮೆಗಳಲ್ಲಿ ಹಣ ತೊಡಗಿಸಿದೆ ?

ಆ) ಚಾಲ್ತಿ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್) ವನ್ನು ಪಡೆಯದೆ ರೋಗಗ್ರಸ್ತಗೊಂಡ ಉದ್ದಿಮೆಗಳ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಉದ್ದಿಮೆಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಂದ ಚಾಲ್ತಿ ಬಂಡವಾಳ ಹೊಂದಿದ್ದು ಮತ್ತು ಹೊಂದದ ಉದ್ದಿಮೆಗಳ ಸಂಖ್ಯೆ ಎಷ್ಟು ?

ಈ) ವಿದ್ಯುತ್ ಪೂರೈಕೆಯ ಕೊರತೆಯ ಕಾರಣಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಹಣ ಪಡೆದ ಎಷ್ಟು ಉದ್ದಿಮೆಗಳು ರೋಗಗ್ರಸ್ತವಾಗಿವೆ. ಇದನ್ನು ಸುಧಾರಿಸಲು ಕೈಗೊಂಡ ನಿರ್ದಿಷ್ಟ ಕಾರ್ಯಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸ್ಥಾಪನೆಯಾದಂದಿನಿಂದ ೧೯೯೦ ರ ಫೆಬ್ರುವರಿ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು ೪೨,೫೬೦ ಖಾತೆಗಳಿಗೆ (ಸುಮಾರು ೫೦ ೦೦೦ ಉದ್ದಿಮೆಗಳಿಗೆ) ೭೭೯.೮೦ ಕೋಟಿ ರೂಪಾಯಿಗಳ ಸಾಲ ವಿತರಣೆ ಮಾಡಿದೆ.

ಅ) ಈ ಸಂಸ್ಥೆಯಿಂದ ಸಾಲ ಪಡೆದ ಉದ್ದಿಮೆಗಳಲ್ಲಿ ಚಾಲ್ತಿ ಬಂಡವಾಳವನ್ನು ಪಡೆಯದೆ ರೋಗಗ್ರಸ್ತಗೊಂಡ ಉದ್ದಿಮೆಗಳ ಸಂಖ್ಯೆ ಸುಮಾರು ೫೦೦.

ಇ) ಮೇಲ್ಕಂಡ ೫೦೦ ಉದ್ದಿಮೆಗಳು ಸಕಾಲಕ್ಕೆ ಚಾಲ್ತಿ ಬಂಡವಾಳವನ್ನು ವಾಣಿಜ್ಯ ಬ್ಯಾಂಕುಗಳಿಂದ ಪಡೆಯದೆ ರೋಗಗ್ರಸ್ತವಾಗಿವೆ.

ಈ) ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಸಾಲ ಪಡೆದ ಉದ್ಯಮಗಳಲ್ಲಿ ೧೮೩ ಉದ್ದಿಮೆಗಳು ವಿದ್ಯುತ್ ಪೂರೈಕೆಯ ಕೊರತೆಯಿಂದಾಗಿ ರೋಗಗ್ರಸ್ತವಾಗಿವೆ. ಇದನ್ನು ಸುಧಾರಿಸಲು ನಿಗಮವು ಈ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಂಡಿದೆ.

(i) ಸಾಧ್ಯವಿರುವ ಸಂದರ್ಭಗಳಲ್ಲಿ ವಿದ್ಯುತ್ ಖೋತಾವನ್ನು ಸಡಿಲಗೊಳಿಸುವಂತೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕೋರಲಾಗಿದೆ.

(ii) ವಿದ್ಯುತ್ ಕೊರತೆಯನ್ನು ಪರಿಹರಿಸಲು ಕರ್ನಾಟಕ ರಾಜ್ಯ ಹಣಕಾಸು ನಿಗಮವು ಸುಲಭ ಪರತ್ತಿನ ಮೇಲೆ ವಿದ್ಯುತ್ ಜನಕ ಯಂತ್ರಗಳನ್ನು ಕೊಳ್ಳಲು ಸಾಲ ಸೌಲಭ್ಯ ಒದಗಿಸುತ್ತಿದೆ.

ರಾಜ್ಯದ ಸಾರ್ವಜನಿಕ ಋಣ ಹೊಣೆಗಾರಿಕೆ

೨೦೮. ಶ್ರೀ ಎಲ್. ಆರ್. ಶಿವರಾಮೇ ಗೌಡ (ನಾಗಮಂಗಲ).—ಮಾನ್ಯ ಆರ್ಥಿಕ, ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರಲ್ಲಿ ಸರ್ಕಾರ ಹೊಂದಿದ್ದ ಸಾಲಗಳ ಹಾಗೂ ಬಾಧ್ಯತೆಗಳ ಮೊತ್ತವೆಷ್ಟು ?

ಆ) ೧೯೮೯ರಲ್ಲಿ ಸರ್ಕಾರ ಹೊಂದಿದ್ದ ಸಾಲದ ಹಾಗೂ ಬಾಧ್ಯತೆಗಳ ಮೊತ್ತವೆಷ್ಟು ?

ಇ) ಈ ಬೃಹತ್ ಸಾಲದ ಹೊರೆಯನ್ನು ಕಡಿಮೆಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮಂತ್ರಿಗಳು).—

ಅ) ದಿನಾಂಕ ೩೧-೩-೧೯೮೩ರಂದು ಬಾಕಿ ಇದ್ದ ಸಾಲಗಳು ಮತ್ತು ಮುಂಗಡಗಳ ಮೊತ್ತ ೧೩೧೬.೫೩ ಕೋಟಿ ರೂ.ಗಳು.

ಆ) ದಿನಾಂಕ ೩೧-೩-೧೯೮೯ರಂದು ಬಾಕಿ ಇದ್ದ ಸಾಲಗಳು ಮತ್ತು ಮುಂಗಡಗಳ ಮೊತ್ತ ೩೦೨೭.೧೩ ಕೋಟಿ ರೂ. ಗಳು.

ಇ) ಭಾರತದ ಸಂವಿಧಾನದ ಅನುಚ್ಛೇದ ೨೯೩(೩)ರ ಮೇರೆಗೆ ಕೇಂದ್ರ ಸರ್ಕಾರದಿಂದ ಮೊದಲೇ ಅನುಮತಿಯನ್ನು ಪಡೆದು ರಾಜ್ಯ ಸರ್ಕಾರವು ಪಡೆಯುವ ಎಲ್ಲಾ ಸಾಲಗಳನ್ನು ಪಡೆಯಬೇಕಾಗಿರುತ್ತದೆ. ಯೋಜನಾ ವೆಚ್ಚಗಳಿಗಾಗಿ ಕೇಂದ್ರ ಸರ್ಕಾರ ಕೊಡುವ ಸಹಾಯವು ಶೇ. ೭೦ ಸಾಲ ರೂಪದಲ್ಲಿಯೂ ಶೇ. ೩೦ ಅನುದಾನ ರೂಪದಲ್ಲಿಯೂ ಇರುವುದರಿಂದ ಈ ಸಾಲದ ಹೊರೆಯು ರಾಜ್ಯ ಸರ್ಕಾರದ ಮೇಲೆ ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿರುತ್ತದೆ. ರಾಜ್ಯದಲ್ಲಿರುವ ಸಂಪನ್ಮೂಲಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣ ಒದಗಿಸುವುದು ಸೀಮಿತವಾಗಿರುವುದರಿಂದ, ಬೇರೆ ಆಯ್ಕೆಯಿಲ್ಲದೆ ಮೇಲೆ ತಿಳಿಸಿದ ಕೇಂದ್ರ ಸರ್ಕಾರದ ನೆರವನ್ನು ಸಾಲದ ರೂಪದಲ್ಲಿ ಪಡೆಯಬೇಕಾಗಿರುತ್ತದೆ. ಪ್ರಸಕ್ತ ಮಾದರಿಯ ಯೋಜನಾ ಸಹಾಯವು ಕೇಂದ್ರ ಸರ್ಕಾರವು ನಿಶ್ಚಯಿಸುವ ಮಾರುಕಟ್ಟೆ ಸಾಲಗಳು ಮತ್ತು ಪರ್ಗಾಯಿಸಿದ ಸಾಲಗಳನ್ನು ಒಳಗೊಂಡಿರುತ್ತದೆ. ರಾಜ್ಯ ಸರ್ಕಾರಗಳು ಸಾಲಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಮಾರ್ಗಸೂಚಿಗಳನ್ನು ನಿರ್ಧರಿಸುವಲ್ಲಿ ಪೂರ್ಣ ಅಧಿಕಾರವನ್ನು ಕೇಂದ್ರ ಸರ್ಕಾರವು ಹೊಂದಿರುತ್ತದೆ.

ರಾಜ್ಯದ ತಲಾದಾಯ ಕುರಿತಂ

೨೨೪. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೨-೮೮ ರಿಂದ ೧೯೮೯-೯೦ರ ಫೆಬ್ರುವರಿವರೆಗಿನ ಪ್ರತಿ ವರ್ಷ ರಾಜ್ಯದ ತಲಾದಾಯದ ಮೊತ್ತವೆಷ್ಟು ?